O.S.No.:70/2020

P.W.:1

ಈ ದಿನ ದಿಃ10.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಟಿಕೆಆರ್ ರವರಿಂದಃ-</u>

1. ನಾನು ವ್ಯವಸಾಯ ಮತ್ತು ವ್ಯಾಪಾರ ಮಾಡುತ್ತೇನೆ. 3ನೇ ಪ್ರತಿವಾದಿ ನನಗೆ 25ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ಅಷ್ಟು ವರ್ಷಗಳಿಂದ ಅಲ್ಲ ಆದರೆ ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ಮತ್ತು ನಾನು ಸೇರಿಕೊಂಡು ಸಾಕಷ್ಟು ವ್ಯವಹಾರಗಳನ್ನು ಮಾಡುತ್ತೇವೆ ಎಂದರೆ ಸರಿಯಲ್ಲ. ರಾಘು ಮತ್ತು ಮಧು ಎನ್ನುವವರು ನನ್ನ ತಂಗಿಯ ಮಕ್ಕಳು ಎಂದರೆ ಸರಿ. 3ನೇ ಪ್ರತಿವಾದಿಯು ಒಂದು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂಗಿಯ ಮಕ್ಕಳಾದ ರಾಘು ಮತ್ತು ಮಧು ರವರು 3ನೇ ಪ್ರತಿವಾದಿಯ ಬಳಿ ತಲಾ 3ಲಕ್ಷ ರೂಪಾಯಿ ಮೊತ್ತದ ಚೀಟಿಯನ್ನು ಕಟ್ಟುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೋಟೇಗೌಡ ಎನ್ನುವವರು ಸಹ 3ನೇ ಪ್ರತಿವಾದಿಯ ಬಳಿ ಚೀಟಿಯನ್ನು ಕಟ್ಟುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯು ಚೀಟಿ ಹಣವನ್ನು ಕೊಡದೆ ಇರುವ ಸಂದರ್ಭದಲ್ಲಿ ಆ ಚೀಟಿ ಹಣದ ಬಾಬ್ತು ಲಿಂಗರಾಜು, ಮೋಟೇಗೌಡ ಮತ್ತು ರಾಜು ರವರು ಚೀಟಿ ಹಣದ ಭದ್ರತೆಗಾಗಿ ಒಂದು ಭದ್ರತ ಪತ್ರವನ್ನು ಬರೆದುಕೊಡುವಂತೆ 3ನೇ ಪ್ರತಿವಾದಿಗೆ ಬೇಡಿಕೆ ಇಟ್ಟಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಲಿಂಗರಾಜು ಮತ್ತು ಮೋಟೇಗೌಡ ರವರು 3ನೇ ಪ್ರತಿವಾದಿಯ ಕಡೆಯಿಂದ ಒಂದು ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದರು, ಆಗ ನಾನು ಕ್ರಯದ ಕರಾರು ಪತ್ರ ಬೇಡ ಖರೀದಿ ಪತ್ರ ಬರೆದುಕೊಡುವಂತೆ 3ನೇ ಪ್ರತಿವಾದಿಗೆ ಬೇಡಿಕೆ ಇಟ್ಟಿದ್ದೆ ಎಂದರೆ ಸರಿಯಲ್ಲ. ಹಾಗಾಗಿ 3ನೇ ಪ್ರತಿವಾದಿಯು ನನ್ನ

ಮೇಲೆ ಇದ್ದ ನಂಬಿಕೆಯ ಆಧಾರದ ಮೇಲೆ ಒಂದು ನಂಬಿಕೆ ಕ್ರಯ ಪತ್ರವನ್ನು ನನಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ರೀತಿ ನಂಬಿಕೆ ಕ್ರಯಪತ್ರವನ್ನು ನನಗೆ ಬರೆದುಕೊಟ್ಟಿದ್ದರು ಸಹ 3ನೇ ಪ್ರತಿವಾದಿಯು ತಾನು ಕೊಡಬೇಕಾಗಿದ್ದ ಹಣಕ್ಕೆ ಸಂಬಂಧಿಸಿದಂತೆ ಬಡ್ಡಿಯನ್ನು ಲಿಂಗರಾಜು ರವರ ಮೂಲಕ ನನಗೆ ಪ್ರತಿ ತಿಂಗಳು ಕೊಡುತ್ತಿದ್ದರು ಎಂದರೆ ಸರಿಯಲ್ಲ.

2. ಮಧು, ರಾಘು, ಲಿಂಗರಾಜು, ಮೋಟೇಗೌಡ ಮತ್ತು ರಾಜು ರವರು ಸೇರಿಕೊಂಡು 3ನೇ ಪ್ರತಿವಾದಿಯಿಂದ ನನಗೆ ಒಂದು ನಂಬಿಕೆ ಕ್ರಯಪತ್ರವನ್ನು ಬರೆಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರ ಬರೆದುಕೊಡುವ ಎರಡು ದಿನಗಳ ಹಿಂದೆ ಈ ಎಲ್ಲ ಮಾತುಕತೆಗಳು ಆಗಿದ್ದವು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ಬಡ್ಡಿಯ ಹಣವನ್ನು ಕೊಡದೆ ಇದ್ದಾಗ ನಾನು ಈ ದಾವೆಯನ್ನು ಅವರ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಡ್ಡಿಯ ವ್ಯವಹಾರಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂಗಿಯ ಮಗನಾದ ರಾಘು ರವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ.

3. ಪ್ರತಿವಾದಿಗಳು ತೊಂದರೆ ಕೊಟ್ಟದ್ದಕ್ಕಾಗಿ ನಾನು ಅವರ ವಿರುದ್ಧ ಪೊಲೀಸ್ ದೂರು ಸಲ್ಲಿಸಿದ್ದೆ. ಈ ರೀತಿ ಪೊಲೀಸ್ ದೂರು ಸಲ್ಲಿಸಿದ್ದೆ ಎಂದು ತೋರಿಸಲು ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ. ನಾನು ಪೊಲೀಸ್ ದೂರನ್ನು ಜನವರಿ 2019ಕ್ಕೆ ಕೊಟ್ಟಿರುತ್ತೇನೆ, ಆದರೆ ದಿನಾಂಕವನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ನಾನು ಪ್ರತಿವಾದಿಗಳ ವಿರುದ್ಧ ಯಾವುದೇ ಪೊಲೀಸ್ ದೂರು

ನೀಡದೆ ಇದ್ದರು ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂಬಿಕೆ ಕ್ರಯಪತ್ರವನ್ನು ನನಗೆ ಬರೆದುಕೊಟ್ಟಿರುವ ಕಾರಣಕ್ಕೆ ನಾನು ದಾವಾಸ್ವತ್ತಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಪ್ರತಿವಾದಿಗಳು ಈಗಲೂ ರೇಷ್ಮೆ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅಲ್ಲಿ ರೇಷ್ಮೆ ಬೆಳೆ ಮತ್ತು ಸೀಮೆಹುಲ್ಲು ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ತಹಶೀಲ್ದಾರ್ ರವರಿಂದ ಹಿಡುವಳಿ ಪತ್ರವನ್ನು ಪಡೆದು ಹಾಜರುಪಡಿಸಿಲ್ಲ. ನೀವು ದಾವಾಸ್ವತ್ತಿನ ಸ್ವಾಧೀನಾನುಭವದಲ್ಲಿದ್ದೇನೆಂದು ತೋರಿಸಲು ರೆವಿನ್ಯೂ ಇನ್ಸ್ಪೆಕ್ಟರ್ ರವರನ್ನು ದಾವಾಸ್ವತ್ತಿಗೆ ಕರೆಯಿಸಿ ಅವರಿಂದ ವರದಿ ತಯಾರಿಸಿ ಅದನ್ನು ಈ ದಾವೆಯಲ್ಲಿ ಸಲ್ಲಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

4. ಕ್ರಯಪತ್ರದಲ್ಲಿ ದಾವಾಸ್ವತ್ತಿನ ಸ್ವಾಧೀನ ಬಿಟ್ಟುಕೊಟ್ಟ ಬಗ್ಗೆ ಯಾವುದೇ ಒಕ್ಕಣೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ಪ್ರತಿವಾದಿಗಳು ಚಿಕ್ಕಮುದುವಾಡಿ ಕಲ್ಪತರು ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು, ಆದರೆ ಆ ಸಾಲವನ್ನು ನಾನೇ ಕಟ್ಟುತ್ತೇನೆ ಎಂದು ಒಪ್ಪಿ ಕೊಂಡಿದ್ದೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ ಈಗಲೂ ಸಹ ಸದರಿ ಸಾಲದ ಬಗ್ಗೆ ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸಾಲ ಕಟ್ಟಿಲ್ಲ, ಕಟ್ಟಬೇಕು ಎಂದು ನುಡಿಯುತ್ತಾರೆ. ನಾನು ಸಾಲ ಕಟ್ಟಲು ಪ್ರಯತ್ನಪಟ್ಟಿರುತ್ತೇನೆ.

5. 3ನೇ ಪ್ರತಿವಾದಿಯು ದಾವಾಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಕೇವಲ ನಂಬಿಕೆ ಕ್ರಯಪತ್ರವನ್ನು ಮಾತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಸಹ 3ನೇ ಪ್ರತಿವಾದಿಯು ಹಣವನ್ನು ನನಗೆ ವಾಪಸ್ಸು ಕೊಡಲು ಸಿದ್ದರು ನಾನು ತೆಗೆದುಕೊಳ್ಳಲು ಸಿದ್ದನಿಲ್ಲ ಎಂದರೆ ಸಾಕ್ಷಿಯು ನಾನು ದಾವಾಸ್ವತ್ತನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕ್ರಯಪತ್ರವನ್ನು 3ನೇ ಪ್ರತಿವಾದಿಯು ಕೇವಲ ಸಾಲದ ಭದ್ರತೆಗಾಗಿಯೇ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದಾವಾಸ್ವತ್ತನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ಪ್ರತಿವಾದಿಗಳಿಂದ ಕಬಳಿಸಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತು ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

O.S.No.:70/2020
P.W.:1

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**